ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ DSERT

**ಸಂಖ್ಯೆ:ಡಿ.ಎಸ್.ಇ.ಆರ್.ಟಿ/ನಿಷ್ಠಾ/ಪ್ರಾ.ಶಾ.ಶಿ.ತ/05/2020-21** **ದಿನಾಂಕ 02.11.2020**

# ಜ್ಞಾಪನ

ವಿಷಯ : ನಿಷ್ಠಾ ಆನ್‌ಲೈನ್ ತರಬೇತಿಯನ್ನು ಉರ್ದು/ಮರಾಠಿ/ತೆಲುಗು/ತಮಿಳು ಮಾಧ್ಯಮದ ಶಿಕ್ಷಕರಿಗೆ ನೀಡುವ ಬಗ್ಗೆ.

ಉಲ್ಲೇಖ : 1. ಎನ್.ಸಿ.ಇ.ಆರ್.ಟಿ ರವರ ಪತ್ರ ಸಂಖ್ಯೆ PS(ಆ)/6-75/2020-21 ದಿ: 30.09.2020
2. ಈ ಕಛೇರಿ ಸಮಸಂಖ್ಯೆ ಪತ್ರ ದಿನಾಂಕ 29.10.2020.
3. ವಿವಿಧ ಸಂಘ, ಡಯಟ್‌ಗಳು ಮತ್ತು ಶಿಕ್ಷಕರಿಂದ ಬಂದಿರುವ ಮನವಿ/ದೂರವಾಣಿ ಬೇಡಿಕೆಗಳನ್ವಯ.

****

ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 1 ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರುಗಳಿಗೆ ನಿಷ್ಠಾ ಆನ್‌ಲೈನ್ ತರಬೇತಿಯನ್ನು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ದಿನಾಂಕ 03.11.2020 ರಿಂದ ಅನುಷ್ಠಾನಗೊಳಿಸಲು ಉಲ್ಲೇಖಿತ ಪತ್ರ 02 ರಲ್ಲಿ ತಿಳಿಸಲಾಗಿದೆ.

ಉಲ್ಲೇಖ 03 ರಲ್ಲಿ ಉರ್ದು, ಮರಾಠಿ, ತೆಲುಗು ಮತ್ತು ತಮಿಳು ಮಾಧ್ಯಮದಲ್ಲಿ ಕೋರ್ಸ್‌ಗಳನ್ನು ಶಿಕ್ಷಕರಿಗೆ ನೀಡಲು ವಿವಿಧ ಸಂಘ, ಡಯಟ್‌ಗಳು ಮತ್ತು ಶಿಕ್ಷಕರಿಂದ ಮನವಿ ಪತ್ರ ಮತ್ತು ದೂರವಾಣಿ ಕರೆಗಳು ಬಂದಿರುತ್ತದೆ. ಸದರಿ ಮಾಧ್ಯಮದ ಶಿಕ್ಷಕರುಗಳಿಗೆ ನಿಷ್ಠಾ ಆನ್‌ಲೈನ್ ತರಬೇತಿಯನ್ನು ಉರ್ದು/ಮರಾಠಿ/ತೆಲುಗು/ತಮಿಳು ಮಾಧ್ಯಮದ ಕೋರ್ಸ್ ಮೆಟೀರಿಯಲ್ ನೀಡಲು ನಿರ್ದೇಶಕರು, ಎನ್.ಸಿ.ಇಆರ್.ಟಿ, ನವದೆಹಲಿ ರವರಿಗೆ ಈಗಾಗಲೆ ಕೋರಲಾಗಿದೆ.

ಈ ಸಂಬಂಧ ನಿರ್ದೇಶಕರು, ಎನ್.ಸಿ.ಇಆರ್.ಟಿ, ನವದೆಹಲಿರವರಿಂದ ಉರ್ದು, ಮರಾಠಿ, ತೆಲುಗು, ತಮಿಳು ಮಾಧ್ಯಮದ ಕೋರ್ಸ್ ಮೆಟೀರಿಯಲ್ ಬಂದ ಕೂಡಲೇ ಉರ್ದು, ಮರಾಠಿ, ತೆಲುಗು, ತಮಿಳು ಮಾಧ್ಯಮದಲ್ಲಿ ನಿಷ್ಠಾ ಆನ್‌ಲೈನ್ ಕೋರ್ಸ್‌ಗಳನ್ನು ನೀಡಲು ಅವಕಾಶ ಕಲ್ಪಿಸಲಾಗುವುದು. ಈಗಾಗಲೇ ಇಂಗ್ಲೀಷ್ ಮಾಧ್ಯಮದಲ್ಲಿ ಕೋರ್ಸ್ ತೆಗೆದುಕೊಳ್ಳಲು ಅವಕಾಶ ಕಲ್ಪಿಸಿದ್ದು, ಆಸಕ್ತ ಶಿಕ್ಷಕರು ಇಂಗ್ಲೀಷ್‌ನಲ್ಲಿ ಕೋರ್ಸ್‌ಗಳನ್ನು ತೆಗೆದುಕೊಳ್ಳಬಹುದು.

2/11

(ಎಂ.ಆರ್.ಮಾರುತಿ)
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು

ಗೆ,

1. ಪ್ರಾಂಶುಪಾಲರು ಹಾಗೂ ನಿಷ್ಠಾ ನೋಡಲ್ ಅಧಿಕಾರಿಗಳು ಸಿಟಿಇ ಚಿತ್ರದುರ್ಗ ಮತ್ತು ಸಿ.ಟಿ.ಇ ಮೈಸೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಅಗತ್ಯ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇವರಿಗೆ ಅಗತ್ಯ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಡಯಟ್‌ನ ನಿಷ್ಠಾ ನೋಡಲ್ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
6. ರಾಜ್ಯದ ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳು ಮತ್ತು SRP-L ಇವರಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಸಾ.ಶಿ.ಇ, ನೃಪತುಂಗರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
4. ಅಪರ ಆಯುಕ್ತರು, ಧಾರವಾಡ ಮತ್ತು ಕಲ್ಬುರ್ಗಿ ವಿಭಾಗರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
5. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.